***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 28.02.2026***

***ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:***

*1. ನಾನು ಪಿಯುಸಿವರೆಗೆ ಓದಿರುತ್ತೇನೆ. ವಾದಿ ನಿಮ್ಮ ರಕ್ತ ಸಂಬಂಧಿ ಎಂದರೆ ಸರಿ. ಈ ಕರಾರುಪತ್ರವಾಗುವ ಒಂದು ತಿಂಗಳು ಮೊದಲು ಹೊಸಸಾಯಪ್ಪನಹಳ್ಳಿಗೆ ಹೋಗಿದ್ದೆನು. 1 ನೇ ಪ್ರತಿವಾದಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಾನು ಹಸು ಖರೀದಿ ಮಾಡಲು ಹೊಸಸಾಯಪ್ಪನಹಳ್ಳಿಗೆ ಹೋದಾಗ ಅವರಿಗೂ ನನಗೂ ವ್ಯವಹಾರ ಇತ್ತು ಎಂದು ಹೇಳುತ್ತಾರೆ. ಮೃತ 1 ನೇ ಪ್ರತಿವಾದಿ ಮನೆಯಲ್ಲಿ ಉಗ್ರೇಗೌಡ, ಅವರ ಹೆಂಡತಿ ಲೀಲಾವತಮ್ಮ ಹಾಗೂ ಮಗ ಪ್ರಸನ್ನ ವಾಸವಿದ್ದರು ಎಂದು ಹೇಳುತ್ತಾರೆ. ಕರಾರುಪತ್ರಕ್ಕೆ ಸಹಿ ಮಾಡುವ ಮೊದಲು ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಎಲ್ಲಿಯಾದರು ಸೇರಿರುತ್ತೀರಾ ಎಂದರೆ ಸಾಕ್ಷಿ ವ್ಯಾಪಾರ ಮಾಡಲು ಪುಟ್ಟೇಗೌಡರ ಮನೆಯಲ್ಲಿ ಸೇರಿದ್ದೆ ಎಂದು ಹೇಳುತ್ತಾರೆ. ವ್ಯಾಪಾರ ಮಾಡುವಾಗ ಯಾರೆಲ್ಲಾ ಸೇರಿದ್ದರು ಎಂದರೆ ವಾದಿ, 1 ನೇ ಪ್ರತಿವಾದಿ, ಅವರ ಹೆಂಡತಿ, ಪ್ರಸನ್ನ, ರಾಮೇಗೌಡರು ಸೇರಿದ್ದೆವು. ಮಾತುಕತೆ ನಡೆದಾಗ ನೀವು ಸೇರಿರಲಿಲ್ಲ ಎಂದರೆ ಸರಿಯಲ್ಲ. ಮಾತುಕತೆಯಾದ ಒಂದು ವಾರದ ಒಳಗಾಗಿ ಕರಾರು ಪತ್ರವಾಯಿತು. ಕರಾರುಪತ್ರವಾಗುವಾಗ ನನ್ನನ್ನು ಪಾಂಡವಪುರಕ್ಕೆ ಉಗ್ರೇಗೌಡರು ಕರೆದುಕೊಂಡು ಬಂದರು. ಕರಾರುಪತ್ರದ ಒಕ್ಕಣೆಗಳನ್ನು ಪೂರ್ಣವಾಗಿ ಓದಿ ನಾನು ಸಹಿ ಮಾಡಿರುತ್ತೇನೆ.*

2. ಮನೆ ಕಟ್ಟಲು ಸಾಲದ ಹಣ ಬೇಕೆಂದು ಕರಾರುಪತ್ರ ಮಾಡುವಾಗ ಹೇಳಿದ್ದರು. ರೂ.5 ಲಕ್ಷ ಹಣವನ್ನು ಉಗ್ರೇಗೌಡರಿಗೆ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿಯಾದ ನಂತರ ಕೊಟ್ಟರು. ಉಗ್ರೇಗೌಡರು ಈ ಹಿಂದೆ ವಾದಿಯಿಂದ ಪಡೆದುಕೊಂಡಿದ್ದ ಸಾಲದ ಹಣದ ಭದ್ರತೆಗಾಗಿ ಆ ದಿನ ಕರಾರಪತ್ರವನ್ನು ಬರೆದುಕೊಟ್ಟರು ಎಂದರೆ ಸರಿಯಲ್ಲ. ವಾದಿ 1 ನೇ ಪ್ರತಿವಾದಿಗೆ ರೂ.5 ಲಕ್ಷ ಹಣವನ್ನು ಕರಾರುಪತ್ರವಾದ ದಿನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಕರಾರುಪತ್ರದ ವಿಚಾರಗಳು ನಿಮಗೇನು ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ ನಿಮ್ಮ ಸಂಬಂಧಿಯಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಕೊಡಲು ಬಂದಿರುತ್ತೀರಾ ಎಂದರೆ ಸರಿಯಲ್ಲ. ಹೊಸಸಾಯಪ್ಪನಹಳ್ಳಿಯಲ್ಲಿ ನೀವು ಹೇಳುವಂತೆ ಮಾತುಕತೆ ಮಾಡಿಲ್ಲ ಎಂದರೆ ಸಾಕ್ಷಿ ಶೆಟ್ಟಿಹಳ್ಳಿಯ ವಾದಿಯ ಮನೆಯಲ್ಲಿ ಮಾತುಕತೆ ನಡೆದಿತ್ತು ಎಂದು ಹೇಳುತ್ತಾರೆ. ನೀವು ಮಾತುಕತೆಗೆ ಸೇರಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬರೆಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**